JANUARY 10, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು, ಕೇಂದ್ರ ಸರ್ಕಾರ, ಪುನಃ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ, ನಿರ್ಣಯ ಅಂಗೀಕರಿಸಲು, ಶೀಘ್ರವೇ ವಿಧಾನಮಂಡಲದ ವಿಶೇ ʼ ಅಧಿವೇಶನ ಕರೆಯಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ತಿಳಿಸಿ, ಮನಮೋಹನ ಸಿಂಗ್ ಅವರು ಪ್ರಧಾನಮಂತ್ರಿ ಆಗಿದ್ದಾಗ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತಂದು, ಕೋಟ್ಯಂತರ ಕುಟುಂಬಗಳಿಗೆ, ಆರ್ಥಿಕ ಬಲ ನೀಡಿದರು. ದಲಿತರು, ಮಹಿಳೆಯರು, ರೈತರಿಗೆ ಉದ್ಯೋಗ ಒದಗಿಸುವುದು, ಯೋಜನೆಯ ಉದ್ದೇಶ ಎಂದಿದ್ದಾರೆ.

<><><>

ರಾಜ್ಯದ ಕಾನೂನು, ಸುವ್ಯವಸ್ಥೆಯ ಪ್ರಸ್ತುತ ಸ್ಥಿತಿಗತಿ ಬಗ್ಗೆ ಚರ್ಚಿಸಲು, ರಾಜ್ಯ ಸರ್ಕಾರ, ಕೂಡಲೇ ವಿಧಾನಮಂಡಲದ ವಿಶೇ ʼ ಅಧಿವೇಶನ ಕರೆಯಬೇಕು ಎಂದು, ವಿಧಾನಸಭೆ ವಿಪಕ್ಷ ನಾಯಕ, ಆರ್. ಅಶೋಕ ಆಗ್ರಹಿಸಿದ್ದಾರೆ. ಧಾರವಾಡ ಜಿಲ್ಲೆಯ, ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಕೇರಳ ಹಾಗೂ ಕರ್ನಾಟಕದ ಗಡಿ ಭಾಗಗಳಲ್ಲಿ, ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಕುರಿತು, ಅಸಮಾಧಾನ ವ್ಯಕ್ತಪಡಿಸಿ, ಕನ್ನಡ ಭಾಷೆ, ಸಂಸ್ಕೃತಿ ವಿಚಾರದಲ್ಲಿ, ರಾಜ್ಯ ಸರ್ಕಾರ ಕಾಳಜಿ ತೋರಬೇಕು ಎಂದು, ಆಗ್ರಹಿಸಿದರು.

<><><>

ಪಶ್ಚಿಮಘಟ್ಟದ ತಪ್ಪಲಿನ, ಚಿಕ್ಕಮಗಳೂರು ಜಿಲ್ಲೆ, ಕುದುರೆಮುಖ ಅರಣ್ಯ ವ್ಯಾಪ್ತಿಯ, ವನವಾಸಿಗರಿಗೆ ಪುನರ್ವಸತಿ ಕಲ್ಪಿಸಲು, 300 ಕೋಟಿ ರೂಪಾಯಿ ವೆಚ್ಚದ, ಪ್ಯಾಕೇಜ್ ಯೋಜನೆ ರೂಪಿಸಲಾಗಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಮಂಗಳೂರಿನ, ಪಿಲಿಕುಳ ನಿಸರ್ಗಧಾಮದ ಬಳಿ, ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರದಲ್ಲಿ ಆಯೋಜಿಸಲಾದ, ರಾಜ್ಯ ಮಟ್ಟದ, ಮೂರು ದಿನಗಳ, 12ನೇ ಬುಲ್‌ಬುಲ್ ಮೇಳ ಉದ್ಘಾಟಿಸಿ, ಅವರು ಮಾತನಾಡಿದರು. ಕುದುರೆಮುಖ ಅರಣ್ಯದಿಂದ, ಈಗಾಗಲೇ 300 ಜನರನ್ನು ಸ್ಥಳಾಂತರಿಸಲಾಗಿದೆ, 600 ಜನ ಕಾಡಿನಲ್ಲಿ ವಾಸಿಸುತ್ತಿದ್ದು, ವಿಶೇ ʼ ಪ್ಯಾಕೇಜ್ ಯೋಜಿಸಬೇಕಿದೆ. ಮಾನವ–ವನ್ಯಜೀವಿ ಸಂಘ ʼ ನಿಯಂತ್ರಿಸಲು, ಸ್ಥಳಾಂತರ ಅನಿವಾರ್ಯ ಎಂದು, ಸಚಿವ ಖಂಡ್ರೆ ನುಡಿದರು.

<><><>

ಧಾರವಾಡ ಜಿಲ್ಲಾ ಮಟ್ಟದ, ಶಿಕ್ಷಕರ ಸಹ ಪಠ್ಯ ಚಟುವಟಿಕೆ ಸ್ಪರ್ಧೆಯಲ್ಲಿ, ಹುಬ್ಬಳ್ಳಿ ಗ್ರಾಮೀಣ ತಾಲೂಕನ್ನು ಪ್ರತಿನಿಧಿಸಿ, 'ಶಿಕ್ಷಣದಲ್ಲಿ ತಂತ್ರಜ್ಞಾನ ಲಾಭ–ನ ʼ' ಪ್ರಬಂಧ ಮಂಡಿಸಿದ, ಕಿರೇಸೂರ ಸರ್ಕಾರಿ ಪ್ರೌಢ ಶಾಲೆ ಶಿಕ್ಷಕ, ಲಿಂಗರಾಜ ರಾಮಾಪೂರ ಪ್ರಥಮ ಸ್ಥಾನ

ಪಡೆದು, ಒಟ್ಟು 14 ಶಿಕ್ಷಕರೊಂದಿಗೆ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಲಿಂಗರಾಜ ರಾಮಾಪೂರ ಧ್ವನಿ 35 ಸೆಕೆಂದುಗಳು

<><><>

'ಇ–ಸ್ವತ್ತು ತಂತ್ರಾಂಶ'ದಲ್ಲಿ ಕೆಲ ಲೋಪಗಳಿದ್ದು, ಆಯ್ದ ಕೆಲ ಜಿಲ್ಲಾ ಪಂಚಾಯ್ತಿ ಸಿ.ಇ.ಒ.ಗಳಿಂದ ಮಾಹಿತಿ ಪಡೆಯಲಾಗಿದೆ; ಈ ತಂತ್ರಾಂಶವನ್ನು ನ್ಯಾಶನಲ್ ಇನ್‌ಫಾರ್ಮೆಟಿಕ್ಸ್ ಸೆಂಟರ್ – ಎನ್.ಐ.ಸಿ ಸಿದ್ಧಪಡಿಸಿದ್ದು, ಶೀಘ್ರ ಎಲ್ಲ ಲೋಪಗಳನ್ನು ಸರಿಪಡಿಸಲು ಸೂಚಿಸಲಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ, ವಿಡಿಯೋ ಸಂವಾದದಲ್ಲಿ ಅವರು ಸಮಾಲೋಚಿಸಿದರು. 'ಇ-ಸ್ವತ್ತು' ಜಾರಿಗೊಳಿಸುವಲ್ಲಿ, ಜಿಲ್ಲಾ ಮಟ್ಟದಲ್ಲಿ ತೆಗೆದುಕೊಳ್ಳಲಾದ ಕ್ರಮಗಳ ಕುರಿತು, ಮಾಹಿತಿ ಪಡೆದ ಸಚಿವರು, ರಾಜ್ಯದ ಎಲ್ಲ ಗ್ರಾಮ ಪಂಚಾಯ್ತಿಗಳಲ್ಲಿ, ಇ–ಸ್ವತ್ತು ಸಹಾಯವಾಣಿ ಸಂಖ್ಯೆ ಪ್ರದರ್ಶಿಸಲು, ಸೂಚಿಸಿದರು.

<><><>

ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಪಿ.ಎಲ್ ಪಾಟೀಲ ಹಾಗೂ ತಿರುವನಂತಪುರದ, ಭಾರತೀಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಉಪ ಕುಲಪತಿ ದೀಪಂಕರ ಬ್ಯಾನರ್ಜಿ, ಮಹತ್ವದ ಒಡಂಬಡಿಕೆಗೆ ಸಹಿ ಹಾಕಿದ್ದಾರೆ. ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಕೃ ್ಣರಾಜ, ಜೈವಿಕ ತಂತ್ರಜ್ಞಾನ ವಿಭಾಗದ ಪ್ರಶಾಂತಿ ಹಾಗೂ ರವಿಕುಮಾರ ಹೊಸಮನಿ, ಐ.ಐ.ಎಸ್.ಟಿ.ಯ ಕುರುವಿಲ್ಲ ಜೋಸೆಫ್, ಪಾಲ್ಗೊಂಡಿದ್ದರು.

<><><>

ಕರ್ನಾಟಕ ಮಾಧ್ಯಮ ಅಕಾದೆಮಿ, 2025ನೇ ಸಾಲಿನ ವಾರ್ಷಿಕ ಪ್ರಶಸ್ತಿ ಹಾಗೂ ದತ್ತಿ ಪ್ರಶಸ್ತಿಗಳನ್ನು ಪ್ರಕಟಿಸಿದೆ. 2025ನೇ ಸಾಲಿನ ವಿಶೇಷ ಪ್ರಶಸ್ತಿಗೆ, ಸರಿತಾ ರೈ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 1 ಲಕ್ಷ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ ಎಂದು, ಮಾಧ್ಯಮ ಅಕಾದೆಮಿ ಅಧ್ಯಕ್ಷೆ ಆಯೇಷಾ ಖಾನಂ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ವಾರ್ಷಿಕ ಪ್ರಶಸ್ತಿಗೆ, 30 ಜನ ಸಾಧಕ ಪತ್ರಕರ್ತರು ಆಯ್ಕೆಯಾಗಿದ್ದು, ಪ್ರಶಸ್ತಿ ಐವತ್ತು ಸಾವಿರ ರೂಪಾಯಿ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

<><><>

ಪ್ರಸಕ್ತ ವರ್ಷದಲ್ಲಿ ರೇಲ್ವೆ ಇಲಾಖೆ, 52 ಪ್ರಮುಖ ಸುಧಾರಣೆಗಳನ್ನು ಜಾರಿಗೆ ತರಲಿದೆ. ಮುಂದಿನ 52 ವಾರಗಳಲ್ಲಿ, 52 ಸುಧಾರಣೆಗಳ ಮೂಲಕ, ದಕ್ಷತೆ, ಪಾರದರ್ಶಕತೆ ಹಾಗೂ ಉತ್ತಮ ಸೇವೆಯನ್ನು ನೀಡಲಿದೆ ಎಂದು, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅಧ್ಯಕ್ಷತೆಯಲ್ಲಿ, ಹೊಸದಿಲ್ಲಿಯ ರೇಲ್ವೆ ಭವನದಲ್ಲಿ ಜರುಗಿದ, ಮಹತ್ವದ ಸಭೆಯ ಬಳಿಕ, ಎಕ್ಸ್ ಮಾಧ್ಯಮದಲ್ಲಿ ಸಚಿವ ಸೋಮಣ್ಣ ಮಾಹಿತಿ ನೀಡಿದ್ದಾರೆ. ರೇಲ್ವೆ ಅಪಘಾತಗಳನ್ನು ತಗ್ಗಿಸಲು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಲಾಗುವುದು, ಎಂದಿದ್ದಾರೆ.

<><><>

ನೈಋತ್ಯ ರೇಲ್ವೆ, ಅಂತರ್ ವಿಭಾಗೀಯ ನಾಟಕ ಸ್ಪರ್ಧೆಯಲ್ಲಿ, ಹುಬ್ಬಳ್ಳಿ ಕಾರ್ಯಾಗಾರ ತಂಡ ಪ್ರದರ್ಶಿಸಿದ, 'ಆಕಾಂಕ್ಷಾ' ನಾಟಕ, ಪ್ರಥಮ ಸ್ಥಾನಕ್ಕೆ ಪಡೆದಿದೆ. ಬೆಂಗಳೂರು ವಿಭಾಗದ ತಂಡ, 'ಕರುಣಾಸಾಗರ' ನಾಟಕಕ್ಕೆ, ದ್ವಿತೀಯಬಹುಮಾನ ಗಳಿಸಿತು. ಬೆಂಗಳೂರಿನ ಎಂ.ಜಿ. ರೇಲ್ವೆ ಕಾಲೋನಿಯಅನುಗ್ರಹ ಸಮುದಾಯ ಭವನದಲ್ಲಿ, ವಿಭಾಗೀಯ ರೇಲ್ವೆ ವ್ಯವಸ್ಥಾಪಕ, ಅಶುತೋ ್

ಕುಮಾರಸಿಂಗ್ ನಾಟಕೋತ್ಸವಕ್ಕೆ, ಚಾಲನೆ ನೀಡಿದರು. ಹುಬ್ಬಳ್ಳಿ ರೇಲ್ವೆ ಕಾರ್ಯಾಗಾರ ತಂಡದ, ಕೆ.ವಿ. ಭಾನುಪ್ರಕಾಶ ಹಾಗೂ ಹುಬ್ಬಳ್ಳಿ ರೇಲ್ವೆ ವಿಭಾಗ ತಂಡದ, ಮಹೇಶ ತಳವಾರ, ತಮ್ಮ ಅತ್ಯುತ್ತಮ ನಟನೆಗಾಗಿ, ಪ್ರಶಸ್ತಿ ಪಡೆದರು.

<><><>

ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘದ, ಚಿತ್ರಕಲಾ ಪ್ರದರ್ಶನ ಸಭಾಭವನದಲ್ಲಿ, ಇಂದು ಸಂಜೆ 7 ಗಂಟೆಗೆ, ಪ್ರೊಫೆಸರ್ ಮಾಧವ ಗಾಡ್ಗೀಳ ಅವರಿಗೆ, ಶ್ರದ್ಧಾಂಜಲಿ ಸಭೆ ಜರುಗಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.